**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ., ರವರ ನ್ಯಾಯಾಲಯ, ನಂಜನಗೂಡು**

**ಸಿ.ಸಿಃ 1466/2016**

| | | |
|---|---|---|
| ಸಾಕ್ಷಿದಾರರ ಹೆಸರು | **ಚಿಕ್ಕಕೆಂಚಶೆಟ್ಟಿ** | **ಪ್ರಾಸಾಃ 07** |
| ತಂದೆಯ/ಗಂಡನ ಹೆಸರು | ಹುಚ್ಚಶೆಟ್ಟಿ | **ಚಾಸಾಃ 07** |
| ವಯಸ್ಸು | 42 ವರ್ಷ | ದಿಃ 06.07.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. |
| ಕೆಲಸ | ಕೂಲಿ | |
| ವಾಸ | ಹಳೆಪುರ ಗ್ರಾಮ | |

**ಮುಖ್ಯ ವಿಚಾರಣೆ ಪ್ರಾಜ್ಞ ಸ.ಸ.ಅ ರವರಿಂದಃ**

ಆರೋಪಿತರ ಪರಿಚಯ ಇದೆ. ನನಗೆ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ. ಪೊಲೀಸರಿಗೆ ನಾನು ಯಾವುದೇ ಹೇಳಿಕೆ ನೀಡಿರುವುದಿಲ್ಲ.

ಸಾಕ್ಷಿ ನಿರಾಕರಿಸಿದ ಹೇಳಿಕೆಯನ್ನು ನಿ.ಪಿ. 8 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯು ಪ್ರತಿಕೂಲ ಸಾಕ್ಷಿ ನುಡಿಯುತ್ತಿದ್ದಾರೆ. ಮಾನ್ಯ ಎ.ಪಿ.ಪಿ.ಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಪ್ರಾಜ್ಞ ಸ.ಸ.ಅ ರವರಿಂದಃ**

ದಿಃ 01.03.2016 ರಂದು ಮಾರಮ್ಮನ ಹಬ್ಬದ ಪ್ರಯುಕ್ತ ಮಧ್ಯಾಹ್ನ 2 ಗಂಟೆಗೆ ಮಾರಮ್ಮನ ಮೆರವಣಿಗೆ ಪ್ರಾರಂಭಿಸಿ ಗ್ರಾಮದ ಬಸ್ ಸ್ಟ್ಯಾಂಡ್ ಸರ್ಕಲ್ ಗೆ ಮಧ್ಯಾಹ್ನ 3 ಗಂಟೆಗೆ ಬಂದಾಗ ಆರೋಪಿಗಳು ಅಕ್ರಮ ಕೂಟ ಸೇರಿಕೊಂಡು ಸರ್ಕಲ್ ಗೆ ಏಕೆ ಬಂದಿದ್ದೀರಿ ಎಂದು ಗಲಾಟೆ ಮಾಡಿ, ಮಾತು ಮಾತು ಬೆಳೆದು ರಸ್ತೆಯಲ್ಲಿ ಬಿದ್ದಿದ್ದ ಕಲ್ಲು, ದೊಣ್ಣೆಗಳನ್ನು ತೆಗೆದುಕೊಂಡು 1 ನೇ ಆರೋಪಿ ಚಾಸಾ 1 ರವರ ಬಲದ ಹಣೆಗೆ ಮತ್ತು ಮೈ ಕೈ ಗೆ ಹೊಡೆದು ರಕ್ತಗಾಯ ಮಾಡಿದ್ದು, ಚಾಸಾ 2 ರವರಿಗೆ 2 ನೇ ಆರೋಪಿ ಕಲ್ಲನ್ನು ಬೀಸಿದಾಗ ಮೂರು ಹಲ್ಲುಗಳು ಸಡಿಲಗೊಂಡಿದ್ದು, ಚಾಸಾ 3 ರವರಿಗೆ 3 ನೇ ಆರೋಪಿ ದೊಣ್ಣೆಯಿಂದ ಎದೆಗೆ ಹೊಡೆದು ನೋವುಂಟು ಮಾಡಿ, ಚಾಸಾ 4 ರವರಿಗೆ 4 ನೇ ಆರೋಪಿ ಕಲ್ಲಿನಿಂದ ಬಲ ಮಂಡಿಗೆ ಹೊಡೆದಿದ್ದು, ಚಾಸಾ 5 ರವರಿಗೆ 5 ನೇ ಆರೋಪಿ ಕಲ್ಲಿನಿಂದ ತಲೆಯ ಭಾಗಕ್ಕೆ ಹೋಡೆದು, ಚಾಸಾ 6 ರವರಿಗೆ ಆರೋಪಿ ಕಲ್ಲಿನಿಂದ ಹಣೆಯ ಮುಂಭಾಗಕ್ಕೆ ಹೊಡೆದು ರಕ್ತಗಾಯಪಡಿಸಿದ್ದು, ನನಗೆ

7 ನೇ ಆರೋಪಿ ಕಲ್ಲಿನಿಂದ ಹಣೆಗೆ ರಕ್ತಗಾಯಪಡಿಸಿದ್ದು, ಚಾಸಾ 8 ರವರಿಗೆ 8 ನೇ ಅರೋಪಿ ಕಲ್ಲಿನಿಂದ ಎಡಗಾಲಿನ ಮಧ್ಯ ಭಾಗಕ್ಕೆ ಹೊಡೆದು ರಕ್ತಗಾಯಪಡಿಸಿದ್ದು, ಚಾಸಾ 9 ರವರಿಗೆ 9 ನೇ ಆರೋಪಿ ಕಲ್ಲನ್ನು ಬೀಸಿದಾಗ ತಲೆಯ ಭಾಗಕ್ಕೆ ಬಿದ್ದಿದ್ದು ರಕ್ತಗಾಯವಾಗಿದ್ದು ಚಾಸಾ 10 ರವರಿಗೆ 10 ನೇ ಆರೋಪಿ ತಳ್ಳಿದಾಗ ಕೆಳಗೆ ಬಿದ್ದು ರಕ್ತಗಾಯವಾಗಿದ್ದು ಚಾಸಾ 11 ರವರಿಗೆ 11 ನೇ ಆರೋಪಿ ಕೆಳಕ್ಕೆ ಕೆಡವಿಕೊಂಡು ಎಡಗಾಲು ಮತ್ತು ಹಣೆಯ ಭಾಗಕ್ಕೆ ರಕ್ತಗಾಯವಾಗಿದ್ದು ಚಾಸಾ 12 ರವರಿಗೆ 12 ನೇ ಆರೋಪಿ ಕೆಳಕ್ಕೆ ಕೆಡವಿ ಮೇಲ್ಭಾಗದ ತುಟಿಗೆ ರಕ್ತಗಾಯ ಮಾಡಿದ್ದು, ಚಾಸಾ 13 ರವರಿಗೆ 13 ನೇ ಆರೋಪಿ ಕೆಳಕ್ಕೆ ತಳ್ಳಿ ಹಣೆಯ ಮುಂಭಾಗಕ್ಕೆ ರಕ್ತಗಾಯಪಡಿಸಿದ್ದು, ಆರೋಪಿ 14 ರಿಂದ 25 ರವರು ಅಕ್ರಮ ಕೂಟದ ಸದಸ್ಯರಾಗಿ ದೊಂಬಿ ಗಲಾಟೆಯಲ್ಲಿ ಭಾಗಿಯಾಗಿದ್ದರು ಎಂದರೆ ಸರಿಯಲ್ಲ.

ಈಗ ಓದಿ ಕೇಳಿಸಿಕೊಂಡ ನಿ.ಪಿ. 8 ರಂತೆ ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ** ಆರೋಪಿ ಪರ ವಕೀಲರಿಂದ ಇಲ್ಲ ಎಂದು ತಿಳಿಸಿರುತ್ತಾರೆ.

**ಮರುವಿಚಾರಣೆಃ ಇಲ್ಲ**

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ.ಹೇ.ಕೇ.ಸ.ಇದೆ.ಎಂ.ಒ**

1 **ನೇ ಹೆಚ್ಚುವರಿ ಸಿ.ಜೆ ಮತ್ತು ಜೆ.ಎಂ.ಎಫ್.ಸಿ**
**ನ್ಯಾಯಾಲಯ, ನಂಜನಗೂಡು**